## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 65 (145) |
| ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.09.2021 |
| ಉತ್ತರಿಸುವವರು | : | ಅರಣ್ಯ, ಆಹಾರ ಹಾಗೂ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಒಟ್ಟು ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶದ ಜಿಲ್ಲಾವಾರು ವಿವರವನ್ನು <u>ಅನುಬಂಧ-1</u>ರಲ್ಲಿ ಒದಗಿಸಿದೆ. |
| (ಆ) | ಅದರಲ್ಲಿ ಒತ್ತುವರಿ ಮಾಡಲಾದ ಭೂಮಿ ಎಷ್ಟು; | ರಾಜ್ಯದಲ್ಲಿ 94,689.04 ಹೆಕ್ಟೇರ್ ಅರಣ್ಯ ಪ್ರದೇಶವು ಒತ್ತುವರಿ ಆಗಿರುತ್ತದೆ. |
| (ಇ) | ಒತ್ತುವರಿ ಮಾಡಲಾದ ಅಕ್ರಮ ಭೂಮಿಯನ್ನು ಸಕ್ರಮಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ಹಾಗೂ ಸಕ್ರಮಗೊಳಿಸಲು ಅನುಸರಿಸುವ ಮಾನದಂಡವೇನು; | ಸರ್ಕಾರದ ಸುತ್ತೋಲೆ ಸಂಖ್ಯೆ: ಅಪಜೀ 45 ಎಫ್‌ಜಿಎಲ್ 2015, ದಿನಾಂಕ 13.03.2015 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಅಪಜೀ 45 ಎಫ್‌ಜಿಎಲ್ 2015, ದಿನಾಂಕ 21.09.2015ರ ಅನುಸಾರ ದಿನಾಂಕ 27.04.1978 ರ ನಂತರ 3:00 ಎಕರೆವರೆಗೆ (ಅರಣ್ಯ ಒತ್ತುವರಿ ಜಮೀನು ಮತ್ತು ಒತ್ತುವರಿದಾರರ ಪಟ್ಟಾ ಜಮೀನು ಸೇರಿ) ಅರಣ್ಯ ಒತ್ತುವರಿ ಮಾಡಿರುವಂತಹ ಒತ್ತುವರಿದಾರರಿಗೆ ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಪ್ಯಾಕೇಜ್ ಕಲ್ಪಿಸುವ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ 3:00 ಎಕರೆವರೆಗಿನ ಒತ್ತುವರಿ ತೆರವು ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. (ಸರ್ಕಾರದ ಸುತ್ತೋಲೆ ಮತ್ತು ಆದೇಶದ ಪ್ರತಿಯನ್ನು <u>ಅನುಬಂಧ-2 ಮತ್ತು 3</u> ರಲ್ಲಿ ಒದಗಿಸಿದೆ). |
| (ಈ) | ಇಲ್ಲಿಯವರೆಗೆ ಸಕ್ರಮಗೊಳಿಸಲಾಗಿರುವ ಭೂಮಿಯ ವಿಸ್ತೀರ್ಣವೆಷ್ಟು? (ಫಲಾನುಭವಿಗಳ ಹೆಸರು ಹಾಗೂ ವಿಸ್ತೀರ್ಣದೊಂದಿಗೆ ಜಿಲ್ಲಾವಾರು ವಿವರ ನೀಡುವುದು) | 1978ರ ಪೂರ್ವದಲ್ಲಿನ ಅತಿಕ್ರಮಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರವು 14,848.73 ಹೆಕ್ಟೇರ್ ಅರಣ್ಯ ಭೂಮಿಯನ್ನು ಸಕ್ರಮಗೊಳಿಸಲು ಅನುಮೋದನೆ ನೀಡಿರುತ್ತದೆ (ಭಾರತ ಸರ್ಕಾರದ ಪತ್ರದ ಪ್ರತಿಯನ್ನು <u>ಅನುಬಂಧ-4</u> ರಲ್ಲಿ ಒದಗಿಸಿದೆ). ಫಲಾನುಭವಿಗಳ ಹೆಸರು ಹಾಗೂ ವಿಸ್ತೀರ್ಣದೊಂದಿಗೆ ಜಿಲ್ಲಾವಾರು ವಿವರವನ್ನು ಕಂದಾಯ ಇಲಾಖೆಯಿಂದ ಪಡೆದು ಒದಗಿಸಬೇಕಿದ್ದು, ಈ ಮಾಹಿತಿ ಒದಗಿಸಲು ಒಂದು ವಾರದ ಕಾಲಾವಕಾಶ ಒದಗಿಸುವಂತೆ ಕೋರಿದೆ. |

ಸಂಖ್ಯೆ: ಅಪಜೀ 111 ಎಫ್‌ಎಫ್ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ ಮತ್ತು ನಾಗರೀಕ ಸರಬರಾಜು
ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

# ಅನುಬಂಧ-1

**Forest area in the State**

Area in Ha.

| Sl.No | District | Taluku | Reserved Forests | Village Forests | Protected Forests | Unclassed Forests* (including Deemed and Statutory Forest) | Private Forests | Total |
|---|---|---|---|---|---|---|---|---|
| 1 | Bengaluru Urban | Anekal | 5416.6 | 80 94 | 218.13 | 2064.58 | 0 | 7780.25 |
| | | Bengaluru North | 1681.33 | 0 | 175.32 | 4659.25 | 0 | 6515.9 |
| | | Bengaluru South | 1963.6 | 0 | 297.26 | 1284.32 | 0 | 3545.18 |
| | | Bengaluru East | 287.74 | 0 | 0 | 254.58 | 0 | 542.32 |
| | | Yelahanka | 0 | 0 | 0 | 1154.23 | 0 | 1154.23 |
| 2 | Bengaluru Rural | Devanahalli | 2136.46 | 0 | 65.97 | 1280 | 0 | 3482.43 |
| | | Doddaballapura | 5943.29 | 0 | 0 | 1348 | 0 | 7291.29 |
| | | Hosakote | 3467.41 | 0 | 95.96 | 1394 | 0 | 4957.37 |
| | | Nelamangala | 2652.03 | 60.74 | 885.67 | 1552 | 0 | 5150.44 |
| 3 | Ramnagar | Ramnagar | 7195.74 | 0 | 938.56 | 1023 | 0 | 9157.3 |
| | | Channapattana | 12471.46 | 0 | 258.59 | 1450 | 0 | 14180.05 |
| | | Kanakapura | 35840.44 | 0 | 1064.2 | 982 | 0 | 37886.64 |
| | | Magadi | 6350.14 | 0 | 1553.76 | 645 | 0 | 8548.9 |
| 4 | Chithradurga | Chelkere | 4980.34 | 0 | 0 | 1893.65 | 0 | 6873.99 |
| | | Chithradurga | 9882.58 | 0 | 0 | 2276 | 0 | 12158.58 |
| | | Hiriyuru | 15776.04 | 0 | 504.99 | 10843.35 | 0 | 27124.38 |
| | | Holalkere | 10723.14 | 0 | 0 | 10246.02 | 0 | 20969.16 |
| | | Hosadurga | 19081.33 | 0 | 0 | 10257.5 | 0 | 29338.83 |
| | | Molkalmuru | 16887.69 | 0 | 0 | 10124.85 | 0 | 27012.54 |
| 5 | Davangere | Chennagiri | 7831.13 | 0 | 2550.96 | 1385.04 | 0 | 11767.13 |
| | | Davangere | 7074.67 | 0 | 0 | 3493 | 0 | 10567.67 |
| | | Harihara | 0 | 0 | 0 | 0 | 0 | 0 |
| | | Honnali | 4703.42 | 40.47 | 541.58 | 74.02 | 0 | 5359.49 |
| | | Jagluru | 12059.5 | 0 | 0 | 0 | 0 | 12059.5 |
| | | Harappanahalli | 20636.8 | 0 | 0 | 624 | 0 | 21260.8 |
| 6 | Kolar | Bangarpet | 6128.23 | 348.02 | 142.94 | 1257.31 | 0 | 7876.5 |
| | | Kolar | 4619.91 | 66 | 983.44 | 209.82 | 0 | 5879.17 |
| | | Maluru | 5721.82 | 131.62 | 966.36 | 500.54 | 0 | 7320.34 |
| | | Mulabagilu | 5349.6 | 0 | 0 | 227.83 | 0 | 5577.43 |
| | | Srinivasapura | 15706.36 | 0 | 848.52 | 976.01 | 0 | 17530.89 |
| | | K.G.F | 0 | 0 | 0 | 522.86 | 0 | 522.86 |
| 7 | Chikkaballapura | Bagepalli | 18061.01 | 0 | 0 | 1487 | 0 | 19548.01 |
| | | Chikkaballapura | 17616.05 | 103.197 | 0 | 5580 | 0 | 23299.247 |
| | | Chintamani | 5435.29 | 121 86 | 0 | 2400 | 0 | 7957.15 |
| | | Gowribidanuru | 5043.71 | 75.68 | 0 | 200 | 0 | 5319.39 |
| | | Gudibande | 5726.22 | 0 | 0 | 193.61 | 0 | 5919.83 |
| | | Siddlagatta | 4178.91 | 0 | 0 | 0 | 0 | 4178.91 |
| 8 | Shimogga | Shimogga | 31705.49 | 404.35 | 9749.16 | 1215.6 | 0 | 43074.6 |
| | | Thirthahalli | 26623.82 | 0 | 25852.31 | 12500 | 0 | 64976.13 |
| | | Bhadravathi | 35636.52 | 0 | 2788.44 | 2091.12 | 0 | 40516.08 |
| | | Sagar | 63547.38 | 0 | 2012.88 | 15650 | 0 | 81210.26 |
| | | Hosanagara | 46477.87 | 97.78 | 172.37 | 0 | 0 | 46748.02 |
| | | Soraba | 12104.78 | 253.25 | 9194.17 | 1023.95 | 0 | 22576.15 |
| | | Shikaripura | 13749.53 | 0 | 10395.31 | 2775.98 | 0 | 26920.82 |
| 9 | Thumkuru | Chikkanayakanahalli | 4723.5 | 313.51 | 787.4 | 3214 | 0 | 9066.25 |
| | | Gubbi | 13961.46 | 0 | | 3268 | 0 | 17382.86 |
| | | Kortagere | 3882.82 | 0 | 1348.64 | 4561 | 0 | 9792.46 |
| | | Kunigal | 8199.45 | 0 | 194.78 | 3844 | 0 | 12415.72 |
| | | Madhugiri | 7022.91 | 155.13 | 112.62 | 3962 | 0 | 11363.92 |
| | | Pavagada | 7569.36 | 1571.63 | 0 | 5267 | 0 | 14536.35 |
| | | Sira | 22329.24 | 751.25 | 42.75 | 3513 | 0 | 27268.37 |
| | | Tipturu | 1920.33 | 0 | 155.06 | 3512 | 0 | 5960.42 |
| | | Tumkuru | 5671.67 | 0 | 324.49 | 3974 | 0 | 12010.81 |
| | | Turuvekere | 1607.46 | 0 | 0 | 2561 | 0 | 4182.56 |
| 10 | Chikkamangaluru | Chikkamangluru | 28005.8 | 27.25 | 1094.39 | 15268 | 0 | 44395.44 |
| | | Mudgere | 40382.86 | 0 | 2676.92 | 12988 | 0 | 56047.78 |
| | | Koppa | 1891.13 | 0 | 0 | 18922 | 0 | 20813.13 |
| | | N.R. Pura | 28749.6 | 0 | 17546.37 | 13450 | 0 | 59745.97 |
| | | Sringeri | 7911.48 | 0 | 0 | 12874 | 0 | 20785.48 |
| | | Kaduru | 1147.3 | 579.9 | 43849.52 | 28952 | 0 | 74528 72 |
| | | Tarikere | 30462.42 | 0 | 5720.2 | 19824 | 0 | 56006.62 |
| | | Ajjampura | 0 | 0 | 0 | 12489 | 0 | 12489 |
| 11 | Dakshinakannada | Mangalore | 1948.81 | 0 | 0 | 12358 | 5246.82 | 19553.63 |
| | | Putturu | 18878.69 | 0 | 0 | 8596 | 0 | 27474.69 |
| | | Sullia | 39524.89 | 0 | 0 | 9852 | 0 | 49376.89 |
| | | Bantwal | 2096.64 | 0 | 0 | 8569 | 0 | 10665.64 |

| | | | | | | | | |
|---|---|---|---|---|---|---|---|---|
| | | Belthagady | 27805.63 | 0 | 0 | 6498 | 0 | 34303.63 |
| | | Moodbidare | 0 | 0 | 0 | 11256 | 0 | 11256 |
| | | Kadaba | 9915.08 | 0 | 0 | 6952 | 0 | 16867.08 |
| 12 | Udapi | Udapi | 3912.59 | 0 | 0 | 12581 | 0 | 16493.59 |
| | | Karakala | 54102.26 | 0 | 0 | 8569 | 0 | 62671.26 |
| | | Kundapura | 56389.04 | 0 | 0 | 9857 | 0 | 66246.04 |
| | | Bramhavara | 0 | 0 | 0 | 12589 | 0 | 12589 |
| | | Kapu | 0 | 0 | 0 | 17985 | 0 | 17985 |
| | | Byndunu | 0 | 0 | 0 | 15897 | 0 | 15897 |
| | | Hebbri | 0 | 0 | 0 | 5987 | 0 | 5987 |
| 13 | Hassan | Alur | 1030.15 | 68.8 | 42.7 | 4977 | 0 | 6118 65 |
| | | Beluru | 2626.2 | 285.22 | 151.3 | 4213 | 0 | 7275.72 |
| | | Hassana | 6431.9 | 124.37 | 189.7 | 3245 | 0 | 9990.97 |
| | | Shakleshpurua | 18614.03 | 0 | 35.9 | 5893 | 0 | 24542.93 |
| | | C.R Patna | 235.78 | 0 | 249.33 | 4345 | 0 | 4830.11 |
| | | Arasikere | 13158.09 | 0 | 2500.86 | 5456 | 0 | 21114.95 |
| | | H.N Pura | 1466.85 | 0 | 0 | 4298 | 0 | 5764.85 |
| | | Arkalgud | 3234 | 173.6 | 0 | 4856 | 0 | 8263.6 |
| 14 | Madikeri | Madkeri | 15536.61 | 0 | 8643.597 | 46420 | 0 | 70600.207 |
| | | Virajpet | 77320.41 | 0 | 1599.17 | 45990 | 0 | 124909.58 |
| | | Somwaepet | 5256.42 | 0 | 6056.82 | 47880 | 0 | 59193.24 |
| 15 | Mandya | Mandya | 3192.06 | 0 | 0 | 6309 | 0 | 9501.06 |
| | | Maddur | 129.09 | 0 | 0 | 7120 | 0 | 7249.09 |
| | | Malavalli | 0 | 0 | 0 | 5264 | 0 | 5264 |
| | | Pandavapura | 6429.66 | 0 | 0 | 5998 | 0 | 12427.66 |
| | | Srirangapattana | 998.44 | 0 | 0 | 6771 | 0 | 7769.44 |
| | | K.R Pet | 4729.83 | 80.93 | 0 | 7854 | 0 | 12664.76 |
| | | Nagamangala | 5093.55 | 0 | 0 | 6523 | 0 | 11615.55 |
| 16 | Mysore | Mysore | 794.62 | 0 | 0 | 2722 | 0 | 3516.62 |
| | | Nanjangudu | 0 | 0 | 0 | 3051 | 0 | 3051 |
| | | T. Narisipura | 1384.88 | 0 | 0 | 2775 | 0 | 4159.88 |
| | | Hunsuru | 12161.66 | 0 | 0 | 2446 | 0 | 14607 66 |
| | | H.D Kote | 5769.04 | 0 | 0 | 2210 | 0 | 7979.04 |
| | | Periyapattana | 14813.35 | 0 | 0 | 2964 | 0 | 17777.35 |
| | | K.R Nagar | 289 35 | 0 | 0 | 2981 | 0 | 3270.35 |
| | | Sarguru | 0 | 0 | 0 | 2114 | 0 | 2114 |
| 17 | Chamarajnagar | Chamarajanagar | 26781.11 | 0 | 0 | 401 | 0 | 27182.11 |
| | | Gundlupet | 0 | 0 | 0 | 420 | 0 | 420 |
| | | Kollegal | 29300 | 0 | 0 | 437 | 0 | 29737 |
| | | Yalanduru | 10031.11 | 0 | 0 | 399 | 0 | 10430.11 |
| | | Hanuru | 90618.75 | 0 | 0 | 451 | 0 | 91069.75 |
| 18 | Belgum | Athani | 113.5 | 233.44 | 502.35 | 1254 | | 2103.29 |
| | | Balihongala | 0 | 0 | 0 | 1125 | | 1125 |
| | | Belgum | 0 | 0 | 9.64 | 958 | | 967.64 |
| | | Chikkodi | 544.27 | 0 | 269.18 | 785 | | 1598.45 |
| | | Gokak | 14654.53 | 0 | 0 | 1459 | | 16113.53 |
| | | Khanapur | 0 | 0 | 0 | 1862 | | 1862 |
| | | Raibag | 3018.72 | 0 | 0 | 1287 | | 4305.72 |
| | | Ramdurg | 15478.69 | 0 | 0 | 689 | | 16167.69 |
| | | Saundatti | 13005.44 | 0 | 0 | 1524 | | 14529.44 |
| | | Hukkeri | 0 | 0 | 0 | 1242 | | 1242 |
| | | Nippani | 0 | 0 | 0 | 982 | | 982 |
| | | Kagavada | 0 | 0 | 0 | 548 | | 548 |
| | | Kitthuru | 0 | 0 | 0 | 1085 | | 1085 |
| | | Mudalagi | 0 | 0 | 0 | 875 | | 875 |
| 19 | Vijapura | Basavana Bagewadi | 1191 52 | 0 | 0 | 532 | 0 | 1723.52 |
| | | Vijapura | 95.01 | 0 | 11.23 | 982 | 0 | 1088.24 |
| | | Indi | 113.34 | 0 | 0 | 658 | 0 | 771.34 |
| | | Muddebihal | 0 | 0 | 0 | 850 | 0 | 850 |
| | | Sindagi | 0 | 0 | 0 | 213 | 0 | 213 |
| | | Bableshwara | 933 03 | 0 | 0 | 256 | 0 | 1189.03 |
| | | Nidagundhi | 0 | 0 | 0 | 892 | 0 | 892 |
| | | Thikota | 0 | 0 | 0 | 325 | 0 | 325 |
| | | Devara Hippargi | 0 | 0 | 0 | 231 | 0 | 231 |
| | | Talikote | 0 | 0 | 0 | 356 | 0 | 356 |
| | | Chadachana | 0 | 0 | 0 | 856 | 0 | 856 |
| | | Kolhata | 0 | 0 | 0 | 389 | 0 | 389 |
| 20 | Bagalkot | Badami | 32364.52 | 0 | 0 | 812 | 0 | 33176.52 |
| | | Bagalkot | 11829.02 | 0 | 0.29 | 425 | 0 | 12254.31 |
| | | Bilagi | 12113.25 | 0 | 0 | 982 | 0 | 13095.25 |
| | | Hunagunda | 3169.36 | 0 | 0 | 368 | 0 | 3537.36 |
| | | Jamkhandi | 11037.15 | 0 | 0 | 225.84 | 0 | 11262.99 |
| | | Mudhol | 4157.65 | 0 | 0 | 456 | 0 | 4613.65 |
| | | Guledagudda | 0 | 0 | 0 | 485 | 0 | 485 |

| | | | | | | | | |
|---|---|---|---|---|---|---|---|---|
| | | Rabakavi-Bhanhatti | 0 | 0 | 0 | 549 | 0 | 549 |
| | | Ilkal | 6642.42 | 0 | 0 | 521 | 0 | 7163.42 |
| 21 | Dharwad | Dharwad | 15218.08 | 0 | 531.97 | 621.74 | 0 | 16371.79 |
| | | Hubbli | 2134.61 | 0 | 30.01 | 163.9 | 0 | 2328.52 |
| | | Kalahatagi | 19999.36 | 0 | 0 | 364.43 | 0 | 20363.79 |
| | | Kundagol | 0 | 0 | 0 | 86 | 0 | 86 |
| | | Navalgunda | 0 | 0 | 0 | 235 | 0 | 235 |
| | | Anngeri | 0 | 0 | 0 | 95 | 0 | 95 |
| | | Alnavara | 0 | 0 | 0 | 59 | 0 | 59 |
| 22 | Gadag | Gadag | 3013.74 | 0 | 1193.33 | 130 | 0 | 4337.07 |
| | | Mundargi | 18661.9 | 0 | 2365.32 | 140 | 0 | 21167.22 |
| | | Naragunda | 119.05 | 0 | 0 | 160 | 0 | 279.05 |
| | | Rona | 456.39 | 0 | 0 | 80 | 0 | 536.39 |
| | | Shirhatti | 11870.98 | 0 | 0 | 25 | 0 | 11895.98 |
| | | Gajendragada | 0 | 0 | 0 | 254 | 0 | 254 |
| | | Lakshmeshwara | 0 | 0 | 0 | 70 | 0 | 70 |
| 23 | Haveri | Byadagi | 4599.8 | 0 | 161.55 | 291.73 | 0 | 5053.08 |
| | | Hanagal | 8907.46 | 0 | 249.41 | 1458 | 0 | 10614.87 |
| | | Haveri | 2770.46 | 0 | 0 | 13.55 | 0 | 2784 01 |
| | | Hirekerur | 8987.31 | 0 | 97.9 | 1952 | 0 | 11037 21 |
| | | Ranebennuru | 10922.66 | 0 | 128.77 | 688.2 | 0 | 11739.63 |
| | | Savanur | 1348.11 | 0 | 0 | 1369 | 0 | 2717.11 |
| | | Shiggaon | 8151.27 | 0 | 241.51 | 895 | 0 | 9287.78 |
| | | Rattihalli | 0 | 0 | 0 | 935 | 0 | 935 |
| 24 | Uttara Kannada | Ankola | 61069.13 | 246.34 | 769.38 | 0 | 0 | 62084.85 |
| | | Bhatakala | 20771.53 | 0 | 845.983 | 0 | 0 | 21617.513 |
| | | Haliyal | 4081.52 | 26.93 | 0 | 0 | 0 | 4108.45 |
| | | Hionnavara | 59968.91 | 5.48 | 1005.844 | 0 | 0 | 60980.234 |
| | | Karwar | 50181.98 | 0 | 0 | 9 | 0 | 50190.98 |
| | | Kumata | 52958.93 | 1707 78 | 534.62 | 6 | 0 | 55207.33 |
| | | Mundagod | 49067.32 | 0 | 0 | 12 | 0 | 49079.32 |
| | | Siddapura | 52269.4 | 0 | 0 | 0 | 0 | 52269.4 |
| | | Sirsi | 93668.59 | 0 | 54619.62 | 0 | 0 | 148288.21 |
| | | Joida | 136220.45 | 0 | 5619.57 | 13 | 0 | 141853.02 |
| | | Yellapura | 120146.07 | 0 | 0 | 0 | 0 | 120146.07 |
| | | Dhandeli | 7819 05 | 0 | 0 | 4 | 0 | 7823.05 |
| 25 | Bellary | Bellary | 6172.34 | 0 | 0 | 2022.9 | 0 | 8195.24 |
| | | Sanduru | 29635.23 | 0 | 0 | 956 | 0 | 30591.23 |
| | | Sirguppa | 0 | 0 | 0 | 845 | 0 | 845 |
| | | Kudagali | 30823.77 | 0 | 0 | 833 | 0 | 31656.77 |
| | | Kurugodu | 0 | 0 | 0 | 861 | 0 | 861 |
| 26 | Vijayanagara | Kotturu | 9012.55 | 0 | 0 | 978.52 | 0 | 9991.07 |
| | | Kampli | 8275.6 | 0 | 0 | 345 | 0 | 8620.6 |
| | | Hadagali | 4328.2 | 0 | 0 | 765 | 0 | 5093.2 |
| | | Hagari Bommanhalli | 3197.89 | 0 | 0 | 921 | 0 | 4118.89 |
| | | Hospet | 10280.86 | 0 | 0 | 841 | 0 | 11121.86 |
| | | Harapanahalli | 20636.8 | 0 | 0 | 869 | 0 | 21505.8 |
| 27 | Bidar | Aurad | 180.25 | 0 | 0 | 786.48 | 0 | 966.73 |
| | | Bhalki | 0 | 0 | 38.85 | 1554.6 | 0 | 1593.45 |
| | | Bidar | 2349.87 | 0 | 207.6 | 2179.68 | 0 | 4737.15 |
| | | Basavakalyana | 489.28 | 0 | 0 | 783.39 | 0 | 1272.67 |
| | | Humnabad | 1833.35 | 0 | 1569.125 | 1353.34 | 0 | 4756.015 |
| | | Chitaguppa | 0 | 0 | 0 | 6458 | 0 | 6458 |
| | | Hulasuru | 0 | 0 | 0 | 7548 | 0 | 7548 |
| | | Kamala Nagar | 0 | 0 | 0 | 7314 | 0 | 7314 |
| 28 | Kalaburagi | Kalaburagi | 1050 | 0 | 0 | 3598 | 0 | 4648 |
| | | Afzalpur | 0 | 0 | 0 | 4521 | 0 | 4521 |
| | | Alanda | 0 | 0 | 0 | 3423 | 0 | 3423 |
| | | Chittapur | 0 | 0 | 0 | 2451 | 0 | 2451 |
| | | Jewargi | 0 | 0 | 0 | 3951 | 0 | 3951 |
| | | Sedam | 253.38 | 0 | 0 | 2456 | 0 | 2709 38 |
| | | Chincholi | 2305.67 | 0 | 98.76 | 11.65 | 0 | 2416.08 |
| | | Kagai | 0 | 0 | 0 | 2354 | 0 | 2354 |
| | | Kamalapura | 0 | 0 | 0 | 2953 | 0 | 2953 |
| | | Yedrami | 0 | 0 | 0 | 2145 | 0 | 2145 |
| | | Shahabhadh | 0 | 0 | 0 | 1245 | 0 | 1245 |
| 29 | Yadgiri | Shahapur | 0 | 0 | 0 | 1345 | 0 | 1345 |
| | | Surpur | 5204.82 | 0 | 0 | 1985 | 0 | 7189.82 |
| | | Yadgiri | 5312.94 | 0 | 0 | 5214 | 0 | 10526.94 |
| | | Hunasagi | 0 | 0 | 0 | 5641 | 0 | 5641 |
| | | Vadagera | 0 | 0 | 0 | 1456 | 0 | 1456 |
| | | Gurumitkal | 0 | 0 | 0 | 5423 | 0 | 5423 |
| 30 | Raichur | Devadurga | 12112.26 | 0 | 178.14 | 1244 | 0 | 13534.4 |
| | | Manvi | 6858.01 | 0 | 186.09 | 1684 | 0 | 8728.1 |

| | | | | | | | | |
|---|---|---|---|---|---|---|---|---|
| | | Raichur | 1084.67 | 0 | 1336.45 | 1254 | 0 | 3675.12 |
| | | Lingasuru | 0 | 0 | 1075.48 | 1588 | 0 | 2663.48 |
| | | Sindhanuru | 0 | 0 | 1328.61 | 1104 | 0 | 2432.61 |
| | | Maski | 0 | 0 | 0 | 1388 | 0 | 1388 |
| | | Sirvara | 0 | 0 | 0 | 1488 | 0 | 1488 |
| 31 | Koppal | Koppal | 0 | 0 | 363 | 1535.74 | 0 | 1898.74 |
| | | Yelburga | 0 | 0 | 124 | 3190 | 0 | 3314 |
| | | Kushtagi | 3884.41 | 0 | 246 | 3007 | 0 | 7137.41 |
| | | Gangavathi | 10645.28 | 0 | 221 | 4508 | 0 | 15374.28 |
| | | Kukanuru | 0 | 0 | 388 | 3499 | 0 | 3887 |
| | | Kanakagiri | 0 | 0 | 371 | 2716 | 0 | 3087 |
| | | Karatagi | 0 | 0 | 35 | 3874 | 0 | 3909 |
| | | **Grand Total** | 2998761.88 | 8135.467 | 242533.949 | 964484.91 | 5246.82 | 4219163.026 |

***Areas pertaining to unclassed forests are subjected to reconcilation. The areas of Statutory forests are being reconciled and above extent of forest areas are subjected to final outcome of the reconciliation process.**

## ಅನುಬಂಧ - 2

### ಕರ್ನಾಟಕ ಸರ್ಕಾರ

ಸಂಖ್ಯೆ ಅಪಜೀ 45 ಎಫ್‌ಜಿಎಲ್ 2015

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ 13/03/2015

### ಸುತ್ತೋಲೆ

ವಿಷಯ: ಅರಣ್ಯ ಒತ್ತುವರಿ ಮತ್ತು ಆತನ ಪಟ್ಟಾ ಜಮೀನು ಸೇರಿ ಮೂರು (3) ಎಕರೆಗಿಂತ ಕಡಿಮೆ ಇರುವ ಅರಣ್ಯ ಒತ್ತುವರಿದಾರರನ್ನು ಒಕ್ಕಲೆಬ್ಬಿಸಬಾರದು ಎಂಬುದರ ಬಗ್ಗೆ.

---

1. ಅರಣ್ಯ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಗಳ ಪ್ರಕಾರ ರಾಜ್ಯದಲ್ಲಿ ಈವರೆಗೆ 1,10,626 ಪ್ರಕರಣಗಳಲ್ಲಿ 2,04,442.16 ಎಕರೆ ಅರಣ್ಯ ಪ್ರದೇಶವು ಒತ್ತುವರಿಯಾಗಿರುತ್ತದೆ. ಅರಣ್ಯ ಭೂಮಿಯನ್ನು ಅನಧಿಕೃತವಾಗಿ ಅತಿಕ್ರಮಣ ಮಾಡುವುದು 1963 ರ ಕರ್ನಾಟಕ ಅರಣ್ಯ ಕಾಯ್ದೆಯ ಕಲಂ 24 ರ ಉಲ್ಲಂಘನೆಯಾಗುತ್ತದೆ. ಆದುದರಿಂದ, ಸದರಿ ಕಾಯ್ದೆಯ ಕಲಂ 64 (ಎ) ಪ್ರಕಾರ ಇಂತಹ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 15511-14/2013 ಮತ್ತು ರಿಟ್ ಅರ್ಜಿ ಸಂಖ್ಯೆ: 15500/2013 (ಸಾರ್ವಜನಿಕ ಹಿತಾಸಕ್ತಿ ಅರ್ಜಿ) ಸಮಾಜ ಪರಿವರ್ತನ ಸಮುದಾಯ ಹಾಗೂ ಇತರರು ರಾಜ್ಯ ಸರ್ಕಾರದ ವಿರುದ್ಧ ದಾಖಲಿಸಿರುವ ಮೊಕದ್ದಮೆಗಳ ಕುರಿತಂತೆ ಮಾನ್ಯ ನ್ಯಾಯಾಲಯವು ಅರಣ್ಯ ಪ್ರದೇಶಗಳಲ್ಲಿ ಆಗಿರುವ ಒತ್ತುವರಿಯನ್ನು ತೆರವುಗೊಳಿಸಲು ನಿರ್ದೇಶನ ನೀಡಿರುವುದರಿಂದ, ಅರಣ್ಯ ಒತ್ತುವರಿಯನ್ನು ತೆರವುಗೊಳಿಸುವುದು ಅನಿವಾರ್ಯವಾಗಿರುತ್ತದೆ.

2. ಅರಣ್ಯ ಒತ್ತುವರಿದಾರರನ್ನು ತೆರವುಗೊಳಿಸುವ ಸಂಬಂಧ ವಿಧಾನ ಮಂಡಲದಲ್ಲಿ ವಿಸ್ತೃತವಾಗಿ ಚರ್ಚಿಸಿ, ಸರ್ಕಾರ ಈ ಕೆಳ ಕಾಣಿಸಿರುವಂತೆ ತೀರ್ಮಾನ ತೆಗೆದುಕೊಂಡಿರುತ್ತದೆ.

(ಎ) ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 ರ ಮತ್ತು ನಿಯಮಗಳು 2008 ರ ಕಲಂ 5 ರನ್ವಯ ಯಾರೇ ಅರಣ್ಯವಾಸಿ ಅನುಸೂಚಿತ ಬುಡಕಟ್ಟಿನ ವ್ಯಕ್ತಿಯು ಅಥವಾ ಇತರೆ ಪಾರಂಪರಿಕ ಅರಣ್ಯ ವಾಸಿಗಳು ಅರ್ಜಿ ಹಾಕಿದ್ದಲ್ಲಿ ಪರಿಶೀಲನಾ ಪ್ರಕ್ರಿಯೆ ಪೂರ್ಣವಾಗುವವರೆಗೆ ಅವನ ಅಧಿಭೋಗದಲ್ಲಿರುವ ಅರಣ್ಯ ಜಮೀನಿನಿಂದ ಅವನನ್ನು ಒಕ್ಕಲೆಬ್ಬಿಸಬಾರದು.

(ಬಿ) ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ದಿನಾಂಕ 27/04/1978 ರ ಪೂರ್ವದಲ್ಲಿ ಮಾಡಿದ್ದ 14848.83 ಹೆಕ್ಟೇರ್ ಅರಣ್ಯ ಒತ್ತುವರಿಗಳನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರ ಅಡಿಯಲ್ಲಿ ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮಂತ್ರಾಲಯದ ಪತ್ರ ಸಂಖ್ಯೆ: 8-50/95 ಎಫ್.ಸಿ. ದಿನಾಂಕ: 10/05/1996 ರಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಿಸಲು ಅನುಮತಿ ನೀಡಿರುತ್ತದೆ. 1996 ರಲ್ಲಿ

ಕೇಂದ್ರ ಸರ್ಕಾರದ ಅನುಮತಿ ಕೋರಿ ಸಲ್ಲಿಸಲಾಗಿರುವ ಪ್ರಸ್ತಾವನೆಗಳಲ್ಲಿ ಕೆಲವು
ಅರ್ಹ ಒತ್ತುವರಿದಾರರ ಪ್ರಕರಣಗಳು ಕೈಬಿಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ
ಬಂದಿದ್ದು, ಮೂರು ಎಕರೆಗಿಂತ ಕಡಿಮೆ ಇರುವ (ಒತ್ತುವರಿ ಭೂಮಿ ಮತ್ತು ಆತನ
ಪಟ್ಟಾ ಭೂಮಿ ಸೇರಿ) ಅರ್ಹ ಪ್ರಕರಣಗಳನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ 1980
ರಡಿಯಲ್ಲಿ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

(ಸಿ) ಅರಣ್ಯ (ಸಂರಕ್ಷಣೆ) ಕಾಯ್ದೆ 1980 ಜಾರಿಗೆ ಬರುವ ಪೂರ್ವದಲ್ಲಿ ರಾಜ್ಯ
ಸರ್ಕಾರದ ಸಕ್ಷಮ ಪ್ರಾಧಿಕಾರಗಳು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭೂ
ಮಂಜೂರಾತಿ ಕಾಯ್ದೆ ಮತ್ತು ನಿಯಮಗಳು ಹಾಗೂ ಇತರೆ ಕಾನೂನಾತ್ಮಕ
ನಿಯಮಗಳಡಿಯಲ್ಲಿ ಅನೇಕ ಪ್ರಕರಣಗಳಲ್ಲಿ ಅರಣ್ಯ ಭೂಮಿಯನ್ನು ಮಂಜೂರು
ಮಾಡಿರುತ್ತವೆ. ಆದರೆ, ಆ ವೇಳೆಯಲ್ಲಿ ಕರ್ನಾಟಕದಲ್ಲಿ ಚಾಲ್ತಿಯಿದ್ದಂತಹ ಅರಣ್ಯ
ಕಾಯ್ದೆಗಳನ್ವಯ ಇಂತಹ ಮಂಜೂರಾದ ಅರಣ್ಯ ಭೂಮಿಯನ್ನು Denotification
ಮಾಡಿರುವುದಿಲ್ಲ. ಇದರ ಪರಿಣಾಮವಾಗಿ ಇಂತಹ ಮಂಜೂರಾತಿಗಳು ಕರ್ನಾಟಕ
ಅರಣ್ಯ ಇಲಾಖೆಯ ದಾಖಲೆಗಳಲ್ಲಿ "ಅರಣ್ಯ" ಎಂಬುದಾಗಿ ಮುಂದುವರೆಸಿಕೊಂಡು
ಬರಲಾಗುತ್ತಿದೆ. ಇಂತಹ ಎಲ್ಲಾ ಅರ್ಹ ಅರಣ್ಯ ಭೂ ಮಂಜೂರಾತಿ ಪ್ರಕರಣಗಳನ್ನು
ಅರಣ್ಯ (ಸಂರಕ್ಷಣೆ) ಕಾಯ್ದೆ 1980 ರಡಿಯಲ್ಲಿ ಭಾರತ ಸರ್ಕಾರದ ಅರಣ್ಯ ಪರಿಸರ
ಮತ್ತು ಹವಮಾನ ಬದಲಾವಣೆ ಇಲಾಖೆ, ನವದೆಹಲಿ ಇವರಿಗೆ ಅನುಮತಿಗಾಗಿ
ಕಳುಹಿಸಿಕೊಡಲಾಗುವುದು.

(ಡಿ) ದಿನಾಂಕ 27/04/1978 ರ ನಂತರ 3 ಎಕರೆವರೆಗೆ (ಒತ್ತುವರಿ ಭೂಮಿ ಮತ್ತು
ಆತನ ಪಟ್ಟಾ ಭೂಮಿ ಸೇರಿ) ಅರಣ್ಯ ಒತ್ತುವರಿ ಮಾಡಿರುವಂತಹ ಒತ್ತುವರಿದಾರರಿಗೆ
ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಪ್ಯಾಕೇಜ್ ಕಲ್ಪಿಸುವ ಬಗ್ಗೆ ಸರ್ಕಾರದ
ಹಂತದಲ್ಲಿ ಪರಿಶೀಲಿಸಲಾಗುವುದು.

3. ಮೇಲಿನ 4 ವರ್ಗದ ಪ್ರಕರಣಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಒತ್ತುವರಿಗಳು ಮತ್ತು
ಮಂಜೂರಾತಿಗಳನ್ನು ಅರಣ್ಯ ಕಾಯ್ದೆಗಳು, ಮಾನ್ಯ ಸರ್ವೋಚ್ಚ ನ್ಯಾಯಾಲಯ ವಿವಿಧ ಪ್ರಕರಣಗಳಲ್ಲಿ
ನೀಡಿರುವ ಆದೇಶಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ
ಸಂಖ್ಯೆ 15511-14/2014 ಮತ್ತು 15000/2013 ರ ಆದೇಶದ ಮೇರೆಗೆ ಒತ್ತುವರಿಯಿಂದ
ತೆರವುಗೊಳಿಸಲಾಗುವುದು.

4. ಈ ಮೇಲಿನ ತೀರ್ಮಾನಗಳ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಗಿರುವ ಅರಣ್ಯ
ಒತ್ತುವರಿಗಳಲ್ಲಿ, ಒತ್ತುವರಿ ಭೂಮಿ ಮತ್ತು ಆತನ ಪಟ್ಟಾ ಭೂಮಿ ಸೇರಿ 3.00 ಎಕರೆಗಿಂತ ಕಡಿಮೆ ಇರುವ
ಒತ್ತುವರಿದಾರರನ್ನು ಮುಂದಿನ ಸೂಚನೆಯವರೆಗೆ ಒಕ್ಕಲೆಬ್ಬಿಸಬಾರದು ಎಂಬುದಾಗಿ ಈ ಮೂಲಕ ಸರ್ಕಾರ
ತಿಳಿಯಪಡಿಸಿದೆ.

5. ಈ ಮೇಲಿನ ನಾಲ್ಕನೇ ಕಂಡಿಕೆಯಲ್ಲಿನ ಸೂಚನೆಯು ಬಿಎಂಆರ್‌ಡಿ ವ್ಯಾಪ್ತಿಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ಮಹಾನಗರ ಪಾಲಿಕೆ ವ್ಯಾಪ್ತಿಯ, ಅಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯ, ನಗರ ಸಭೆ ಮತ್ತು ಪುರ ಸಭೆಯಲ್ಲಿ ವ್ಯಾಪ್ತಿಯಲ್ಲಿ ಆಗಿರುವ ಅರಣ್ಯ ಒತ್ತುವರಿದಾರರಿಗೆ ಅನ್ವಯಿಸುವುದಿಲ್ಲ.

(ಕೆ.ಎಸ್. ಸಾಯಿಬಾಬ)
ಸರ್ಕಾರದ ಕಾರ್ಯದರ್ಶಿ (ಅರಣ್ಯ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ/ ಸಮಾಜ ಕಲ್ಯಾಣ ಇಲಾಖೆ.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಭೂ ದಾಖಲೆ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
7. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು.
8. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
9. ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು.
10. ಎಲ್ಲಾ ವಲಯ ಅರಣ್ಯ ಅಧಿಕಾರಿಗಳು.

(6–10: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ ಇವರ ಮುಖಾಂತರ ರವಾನಿಸುವುದು.)

11. ಶಾಖಾ ರಕ್ಷಕ ಕಡತ
12. ಹೆಚ್ಚುವರಿ ಪ್ರತಿಗಳು.

ಅನುಬಂಧ -3

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿನಾಂಕ: 27-04-1978 ರ ಪೂರ್ವದ ಅರಣ್ಯ ಒತ್ತುವರಿಗಳನ್ನು ಸಕ್ರಮಗೊಳಿಸಲು 1996 ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುವ ಪ್ರಸ್ತಾವನೆಗಳಲ್ಲಿ ಕೈಬಿಟ್ಟು ಹೋಗಿರುವ ಅರ್ಹ ಪ್ರಕರಣಗಳನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರಡಿಯಲ್ಲಿ ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಅರಣ್ಯ ಒತ್ತುವರಿ ಮತ್ತು ಒತ್ತುವರಿದಾರನ ಪಟ್ಟಾ ಜಮೀನು ಸೇರಿ ಮೂರು (3) ಎಕರೆಗಿಂತ ಕಡಿಮೆ ಇರುವ ಒತ್ತುವರಿದಾರರನ್ನು ಒಕ್ಕಲೆಬ್ಬಿಸಬಾರದು ಎಂಬುದರ ಬಗ್ಗೆ – ಆದೇಶ.

ಪ್ರಸ್ತಾವನೆ:

ಪ್ರಸ್ತುತ, ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಗಳ ಪ್ರಕಾರ, ರಾಜ್ಯದಲ್ಲಿ ಈವರೆವಿಗೂ ಒಟ್ಟು 110626 ಪ್ರಕರಣಗಳಲ್ಲಿ ಒಟ್ಟು 204442.16 ಎಕರೆ ಅರಣ್ಯ ಪ್ರದೇಶವು ಒತ್ತುವರಿಯಾಗಿರುತ್ತದೆ. ಕರ್ನಾಟಕ ಅರಣ್ಯ ಕಾಯ್ದೆ, 1963 ರ ಕಲಂ 24 ರ ಪ್ರಕಾರ ಅರಣ್ಯ ಪ್ರದೇಶವನ್ನು ಅನಧಿಕೃತವಾಗಿ ಅತಿಕ್ರಮಣ ಮಾಡುವುದು ಕಾಯ್ದೆಯ ಉಲ್ಲಂಘನೆಯಾಗುತ್ತದೆ. ಇದೇ ಕಾಯ್ದೆಯ ಕಲಂ 64(ಎ) ರ ಪ್ರಕಾರ ಇಂತಹ ಅನಧಿಕೃತ ಅರಣ್ಯ ಒತ್ತುವರಿಯನ್ನು ತೆರವುಗೊಳಿಸಲು ಅವಕಾಶವಿರುತ್ತದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ: WP No.15511-14/2013 (ಸಮಾಜ ಪರಿವರ್ತನ ಸಮುದಾಯ) ಮತ್ತು WP No.15500/2013 (ನಮ್ಮ ಬೆಂಗಳೂರು ಫೌಂಡೇಶನ್) ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಅರಣ್ಯ ಪ್ರದೇಶಗಳಲ್ಲಿ ಆಗಿರುವ ಒತ್ತುವರಿಯನ್ನು ತೆರವುಗೊಳಿಸಲು ನಿರ್ದೇಶನ ನೀಡಿರುವುದರಿಂದ, ಅರಣ್ಯ ಒತ್ತುವರಿಯನ್ನು ತೆರವುಗೊಳಿಸುವುದು ಅನಿವಾರ್ಯವಾಗಿರುತ್ತದೆ.

2. ರಾಜ್ಯದಾದ್ಯಂತ ಇರುವ ಒಟ್ಟು ಅರಣ್ಯ ಒತ್ತುವರಿ ಪ್ರಕರಣಗಳು ಮತ್ತು ಒಳಗೊಂಡಿರುವ ವಿಸ್ತೀರ್ಣಗಳ ವಿವರಗಳು ಕೆಳಗಿನಂತಿರುತ್ತದೆ.

| ಕ್ರಸಂ. | ಒತ್ತುವರಿ ಪ್ರಕರಣಗಳು | ಒಟ್ಟು ಪ್ರಕರಣಗಳು | ವಿಸ್ತೀರ್ಣ ಎಕರೆಗಳಲ್ಲಿ |
|---|---|---|---|
| 1 | 30 ಎಕರೆಗೂ ಹೆಚ್ಚಿನ ವಿಸ್ತೀರ್ಣ | 133 | 5344.33 |
| 2 | 10 ರಿಂದ 30 ಎಕರೆವರೆಗಿನ ವಿಸ್ತೀರ್ಣ | 718 | 12898.25 |
| 3 | 03 ರಿಂದ 10 ಎಕರೆವರೆಗಿನ ವಿಸ್ತೀರ್ಣ | 23423 | 71108.13 |
| 4 | 03 ಎಕರೆಗಿಂತ ಕಡಿಮೆ ವಿಸ್ತೀರ್ಣ | 86352 | 115089.25 |

3. ಅರಣ್ಯ ಒತ್ತುವರಿದಾರರನ್ನು ತೆರವುಗೊಳಿಸುವ ಸಂಬಂಧ 14 ನೇ ವಿಧಾನ ಸಭೆಯ 6 ನೇ ಅಧಿವೇಶನದಲ್ಲಿ ಮಾನ್ಯ ಸದಸ್ಯರುಗಳು ವಿಸ್ತೃತವಾಗಿ ಚರ್ಚಿಸುವ ಸಂದರ್ಭದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸದನದಲ್ಲಿ ಈ ಕೆಳಕಂಡಂತೆ ಹೇಳಿಕೆ ನೀಡಿರುತ್ತಾರೆ.

i) ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ, 2006 ರ ಮತ್ತು ನಿಯಮಗಳು 2008 ರ ಕಲಂ 5 ರನ್ವಯ ಯಾರೇ ಅರಣ್ಯವಾಸಿ ಅನುಸೂಚಿತ ಬುಡಕಟ್ಟಿನ ವ್ಯಕ್ತಿಯ ಅಥವಾ ಇತರೆ ಪಾರಂಪರಿಕ ಅರಣ್ಯ ವಾಸಿಗಳು ಅರ್ಜಿ ಹಾಕಿದ್ದಲ್ಲಿ ಪರಿಶೀಲನಾ ಪ್ರಕ್ರಿಯೆ ಪೂರ್ಣವಾಗುವವರೆಗೆ ಅವರ ಅದಿಭೋಗದಲ್ಲಿರುವ ಅರಣ್ಯ ಜಮೀನಿನಿಂದ ಅವನನ್ನು ಒಕ್ಕಲೆಬ್ಬಿಸಬಾರದು.

ii) ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ದಿನಾಂಕ 27/04/1978 ರ ಪೂರ್ವದಲ್ಲಿ ಮಾಡಿದ್ದ 14848.83 ಹೆಕ್ಟೇರ್ ಅರಣ್ಯ ಒತ್ತುವರಿಗಳನ್ನು ಅರಣ್ಯ(ಸಂರಕ್ಷಣಾ) ಕಾಯ್ದೆ 1980 ರ ಅಡಿಯಲ್ಲಿ ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮಂತ್ರಾಲಯದ ಪತ್ರ ಸಂಖ್ಯೆ:8-50/95 ಎಫ್.ಸಿ., ದಿನಾಂಕ 15/05/1996 ರಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಿಸಲು ಅನುಮತಿ ನೀಡಿರುತ್ತದೆ. 1996 ರಲ್ಲಿ ಕೇಂದ್ರ ಸರ್ಕಾರದ ಅನುಮತಿ ಕೋರಿ ರಾಜ್ಯ ಸರ್ಕಾರ ಸಲ್ಲಿಸಲಾಗಿರುವ ಪ್ರಸ್ತಾವನೆಗಳಲ್ಲಿ ಕೆಲವು ಅರ್ಹ ಒತ್ತುವರಿದಾರರ ಪ್ರಕರಣಗಳು ಕೈಬಿಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಮೂರು ಎಕರೆಗಿಂತ ಕಡಿಮೆ ಇರುವ (ಒತ್ತುವರಿ ಭೂಮಿ ಮತ್ತು ಆತನ ಪಟ್ಟಾ ಭೂಮಿ ಸೇರಿ) ಅರ್ಹ ಪ್ರಕರಣಗಳನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರಡಿಯಲ್ಲಿ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

iii) ಅರಣ್ಯ (ಸಂರಕ್ಷಣೆ) ಕಾಯ್ದೆ 1980 ಜಾರಿಗೆ ಬರುವ ಪೂರ್ವದಲ್ಲಿ ರಾಜ್ಯ ಸರ್ಕಾರದ ಸಕ್ಷಮ ಪ್ರಾಧಿಕಾರಗಳು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭೂ ಮಂಜೂರಾತಿ ಕಾಯ್ದೆ ಮತ್ತು ನಿಯಮಗಳು ಹಾಗೂ ಇತರೆ ಕಾನೂನಾತ್ಮಕ ನಿಯಮಗಳಡಿಯಲ್ಲಿ ಅನೇಕ ಪ್ರಕರಣಗಳಲ್ಲಿ ಅರಣ್ಯ ಭೂಮಿಯನ್ನು ಮಂಜೂರು ಮಾಡಿರುತ್ತವೆ. ಆದರೆ, ಆ ವೇಳೆಯಲ್ಲಿ ಕರ್ನಾಟಕದಲ್ಲಿ ಚಾಲ್ತಿಯಿದ್ದಂತಹ ಅರಣ್ಯ ಕಾಯ್ದೆಗಳನ್ವಯ ಇಂತಹ ಮಂಜೂರಾದ ಅರಣ್ಯ ಭೂಮಿಯನ್ನು Denotification ಮಾಡಿರುವುದಿಲ್ಲ. ಇದರ ಪರಿಣಾಮವಾಗಿ ಇಂತಹ ಮಂಜೂರಾತಿಗಳು ಕರ್ನಾಟಕ ಅರಣ್ಯ ಇಲಾಖೆಯ ದಾಖಲೆಗಳಲ್ಲಿ "ಅರಣ್ಯ" ಎಂಬುದಾಗಿ ಮುಂದುವರೆಸಿಕೊಂಡು ಬರಲಾಗುತ್ತಿದೆ. ಇಂತಹ ಎಲ್ಲಾ ಅರ್ಹ ಅರಣ್ಯ ಭೂ ಮಂಜೂರಾತಿ ಪ್ರಕರಣಗಳನ್ನು ಅರಣ್ಯ (ಸಂರಕ್ಷಣೆ) ಕಾಯ್ದೆ 1980 ರಡಿಯಲ್ಲಿ ಭಾರತ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಮಾನ ಬದಲಾವಣೆ ಇಲಾಖೆ, ನವದೆಹಲಿ ಇವರಿಗೆ ಅನುಮತಿಗಾಗಿ ಕಳುಹಿಸಲು,

iv) ದಿನಾಂಕ 27/04/1978 ರ ನಂತರ 3 ಎಕರೆವರೆಗೆ (ಒತ್ತುವರಿ ಭೂಮಿ ಮತ್ತು ಆತನ ಪಟ್ಟಾ ಭೂಮಿ ಸೇರಿ) ಅರಣ್ಯ ಒತ್ತುವರಿ ಮಾಡಿರುವಂತಹ ಒತ್ತುವರಿದಾರರಿಗೆ ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಪ್ಯಾಕೇಜ್ ಕಲ್ಪಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುವುದು.

4. ಪ್ಯಾರ 3ರಲ್ಲಿನ ಅಂಶ (i) ರಿಂದ (iv) ರವರೆಗೆ ಹೇಳಲಾಗಿರುವ ವರ್ಗದ ಪ್ರಕರಣಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಅರಣ್ಯ ಒತ್ತುವರಿಗಳು ಮತ್ತು ಮಂಜೂರಾತಿಗಳನ್ನು ಅರಣ್ಯ ಕಾಯ್ದೆಗಳು, ಮಾನ್ಯ ಸರ್ವೋಚ್ಚ ನ್ಯಾಯಾಲಯ ವಿವಿಧ ಪ್ರಕರಣಗಳಲ್ಲಿ ನೀಡಿರುವ ಆದೇಶಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 15511-14/2014 ಮತ್ತು 15500/2013 ರಲ್ಲಿನ ಆದೇಶದ ಮೇರೆಗೆ ಒತ್ತುವರಿಯಿಂದ ತೆರವುಗೊಳಿಸಲಾಗುವುದು.

5. ಈ ಮೇಲಿನ ತೀರ್ಮಾನಗಳ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಗಿರುವ ಅರಣ್ಯ ಒತ್ತುವರಿಗಳಲ್ಲಿ ಒತ್ತುವರಿ ಭೂಮಿ ಮತ್ತು ಅತನ ಪಟ್ಟಾ ಭೂಮಿ ಸೇರಿ 3-00 ಎಕರೆಗಿಂತ ಕಡಿಮೆ ಇರುವ ಒತ್ತುವರಿದಾರರನ್ನು ಮುಂದಿನ ಸೂಚನೆಯವರೆಗೆ ಒಕ್ಕಲೆಬ್ಬಿಸಬಾರದು ಎಂಬುದಾಗಿ ಈ ಮೂಲಕ ಸರ್ಕಾರ ತಿಳಿಯಪಡಿಸಿದೆ.

6. ಮೇಲಿನ 5 ನೇ ಪ್ಯಾರಾದಲ್ಲಿನ ಸೂಚನೆಯು ಬಿಎಂಆರ್‌ಡಿ ವ್ಯಾಪ್ತಿಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ಮಹಾನಗರ ಪಾಲಿಕೆ ವ್ಯಾಪ್ತಿಯ, ಅಭಿವೃದ್ಧಿ ಪ್ರಾಧಿಕಾರಿಗಳ ವ್ಯಾಪ್ತಿಯ, ನಗರ ಸಭೆ ಮತ್ತು ಪುರಸಭೆಯ ವ್ಯಾಪ್ತಿಯಲ್ಲಿ ಆಗಿರುವ ಅರಣ್ಯ ಒತ್ತುವರಿದಾರರಿಗೆ ಅನ್ವಯಿಸುವುದಿಲ್ಲ.

7. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ವಿಧಾನ ಸಭೆಯಲ್ಲಿ ಮೇಲಿನ ಪ್ಯಾರಾ 3 ರಲ್ಲಿ ತಿಳಿಸಿರುವ ಹೇಳಿಕೆಯ ಹಿನ್ನೆಲೆಯಲ್ಲಿ, ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಸಚಿವ ಸಂಪುಟದ ಘಟನೋತ್ತರ ಅನುಮತಿಯನ್ನು ನಿರೀಕ್ಷಿಸಿ ಸಂಖ್ಯೆ ಅಪಜೀ 45 ಎಫ್‌ಜಿಎಲ್ 2015, ದಿನಾಂಕ 13/03/2015 ರಂದು ಸರ್ಕಾರ ಸುತ್ತೋಲೆಯನ್ನು ಹೊರಡಿಸಲಾಗಿತ್ತು. ಸುತ್ತೋಲೆ ಹೊರಡಿಸಿರುವ ಕ್ರಮವನ್ನು ದಿನಾಂಕ 19/06/2015 ರಂದು ನಡೆದ ಸಚಿವ ಸಂಪುಟವು ಒಪ್ಪಿ ಘಟನೋತ್ತರ ಅನುಮೋದನೆ ನೀಡಿರುತ್ತದೆ. ಆದುದರಿಂದ, ಈ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಅಪಜೀ 45 ಎಫ್‌ಜಿಎಲ್ 2015,</u>
<u>ಬೆಂಗಳೂರು, ದಿನಾಂಕ: 21/09/2015.</u>

ಪ್ರಸ್ತಾವನೆಯಲ್ಲಿನ ವಿವರಗಳು ಮತ್ತು ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರ ಆದೇಶಿಸುತ್ತದೆ.

1) ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ), 2006 ರ ಮತ್ತು ನಿಯಮಗಳು 2008 ರ ಕಲಂ 5 ರನ್ವಯ ಯಾರೇ ಅರಣ್ಯವಾಸಿ ಅನುಸೂಚಿತ ಬುಡಕಟ್ಟಿನ ವ್ಯಕ್ತಿಯ ಅಥವಾ ಇತರೆ ಪಾರಂಪರಿಕ ಅರಣ್ಯ ವಾಸಿಗಳು ಅರ್ಜಿ ಹಾಕಿದ್ದಲ್ಲಿ ಪರಿಶೀಲನಾ ಪ್ರಕ್ರಿಯೆ ಪೂರ್ಣವಾಗುವವರೆಗೆ ಅವರ ಅದಿಭೋಗದಲ್ಲಿರುವ ಅರಣ್ಯ ಜಮೀನಿನಿಂದ ಅವರನ್ನು ಒಕ್ಕಲೆಬ್ಬಿಸಬಾರದು.

2) ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ದಿನಾಂಕ 27/04/1978 ರ ಪೂರ್ವದಲ್ಲಿ ಮಾಡಿದ್ದ 14848.83 ಹೆಕ್ಟೇರ್ ಅರಣ್ಯ ಒತ್ತುವರಿಗಳನ್ನು ಅರಣ್ಯ(ಸಂರಕ್ಷಣಾ) ಕಾಯ್ದೆ 1980 ರ ಅಡಿಯಲ್ಲಿ ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮಂತ್ರಾಲಯದ ಪತ್ರ ಸಂಖ್ಯೆ: 8-50/95 ಎಫ್.ಸಿ., ದಿನಾಂಕ 15/05/1996 ರಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಿಸಲು ಅನುಮತಿ ನೀಡಿರುವ ಪ್ರಕರಣಗಳನ್ನು ಹೊರತುಪಡಿಸಿ, 1996

ರಲ್ಲಿ ಕೇಂದ್ರ ಸರ್ಕಾರದ ಅನುಮತಿ ಕೋರಿ ರಾಜ್ಯ ಸರ್ಕಾರ ಸಲ್ಲಿಸಲಾದ ಪ್ರಸ್ತಾವನೆಗಳಲ್ಲಿ ಸೇರಿಲ್ಲದ ಅರ್ಹ ಒತ್ತುವರಿದಾರರ ಪ್ರಕರಣಗಳ ಪೈಕಿ ಮೂರು ಎಕರೆಗಿಂತ ಕಡಿಮೆ ವಿಸ್ತೀರ್ಣವಿರುವ (ಅರಣ್ಯ ಒತ್ತುವರಿ ಜಮೀನು ಮತ್ತು ಒತ್ತುವರಿದಾರನ ಪಟ್ಟಾ ಜಮೀನು ಸೇರಿ) ಅರ್ಹ ಪ್ರಕರಣಗಳನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರಡಿಯಲ್ಲಿ ಸಕ್ರಮಗೊಳಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ವಿಭಾಗಾವಾರು ಮತ್ತು ವೃತ್ತವಾರು ಪ್ರಸ್ತಾವನೆಗಳನ್ನು ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಇವರ ಮೂಲಕ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ರೀತ್ಯಾ ಸರ್ಕಾರಕ್ಕೆ ಸಲ್ಲಿಸುವುದು.

3) ಅರಣ್ಯ (ಸಂರಕ್ಷಣೆ) ಕಾಯ್ದೆ 1980 ಜಾರಿಗೆ ಬರುವ ಪೂರ್ವದಲ್ಲಿ ರಾಜ್ಯ ಸರ್ಕಾರದ ಸಕ್ಷಮ ಪ್ರಾಧಿಕಾರಗಳು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭೂ ಮಂಜೂರಾತಿ ಕಾಯ್ದೆ ಮತ್ತು ನಿಯಮಗಳು ಹಾಗೂ ಇತರೆ ಕಾನೂನಾತ್ಮಕ ನಿಯಮಗಳಡಿಯಲ್ಲಿ ಅನೇಕ ಪ್ರಕರಣಗಳಲ್ಲಿ ಅರಣ್ಯ ಭೂಮಿಯನ್ನು ಮಂಜೂರು ಮಾಡಿರುತ್ತವೆ. ಆದರೆ, ಆ ವೇಳೆಯಲ್ಲಿ ಕರ್ನಾಟಕದಲ್ಲಿ ಚಾಲ್ತಿಯಿದ್ದಂತಹ ಅರಣ್ಯ ಕಾಯ್ದೆಗಳನ್ವಯ ಇಂತಹ ಮಂಜೂರಾದ ಅರಣ್ಯ ಭೂಮಿಯನ್ನು Denotification ಮಾಡಿರುವುದಿಲ್ಲ. ಇದರ ಪರಿಣಾಮವಾಗಿ ಇಂತಹ ಮಂಜೂರಾತಿಗಳು ಕರ್ನಾಟಕ ಅರಣ್ಯ ಇಲಾಖೆಯ ದಾಖಲೆಗಳಲ್ಲಿ ಅರಣ್ಯ ಎಂಬುದಾಗಿ ಮುಂದುವರೆಸಿಕೊಂಡು ಬರಲಾಗುತ್ತಿದೆ. ಇಂತಹ ಎಲ್ಲಾ ಅರ್ಹ ಅರಣ್ಯ ಭೂ ಮಂಜೂರಾತಿ ಪ್ರಕರಣಗಳನ್ನು ಅರಣ್ಯ (ಸಂರಕ್ಷಣೆ) ಕಾಯ್ದೆ 1980 ರಡಿಯಲ್ಲಿ Denotification ಮಾಡಲು ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಮಾನ ಬದಲಾವಣೆ ಇಲಾಖೆ, ನವದೆಹಲಿ ಇವರಿಗೆ ಅನುಮತಿಗಾಗಿ ಕೋರಿ ಪ್ರಸ್ತಾವನೆ ಸಲ್ಲಿಸಲು ವಿಭಾಗಾವಾರು ಮತ್ತು ವೃತ್ತವಾರು ಪ್ರಸ್ತಾವನೆಗಳನ್ನು ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಇವರ ಮೂಲಕ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ರೀತ್ಯಾ ಸರ್ಕಾರಕ್ಕೆ ಸಲ್ಲಿಸುವುದು.

4) ದಿನಾಂಕ 27/04/1978 ರ ನಂತರ 3 ಎಕರೆವರೆಗೆ (ಅರಣ್ಯ ಒತ್ತುವರಿ ಜಮೀನು ಮತ್ತು ಒತ್ತುವರಿದಾರನ ಪಟ್ಟಾ ಜಮೀನು ಸೇರಿ) ಅರಣ್ಯ ಒತ್ತುವರಿ ಮಾಡಿರುವಂತಹ ಒತ್ತುವರಿದಾರರಿಗೆ ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಪ್ಯಾಕೇಜ್ ಕಲ್ಪಿಸಲು ಸೂಕ್ತವಾದ ಪ್ರಸ್ತಾವನೆಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಸರ್ಕಾರಕ್ಕೆ ಸಲ್ಲಿಸುವುದು.

5) ಆದೇಶ ಭಾಗದ ಪ್ಯಾರಾ 1 ರಿಂದ 4 ರ ವರೆಗಿನವರೆಗೆ ಹೇಳಲಾಗಿರುವ ಪ್ರಕರಣಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಅರಣ್ಯ ಒತ್ತುವರಿಗಳು ಮತ್ತು ಮಂಜೂರಾತಿಗಳನ್ನು ಅರಣ್ಯ ಕಾಯ್ದೆಗಳು, ಮಾನ್ಯ ಸರ್ವೋಚ್ಚ ನ್ಯಾಯಾಲಯ ವಿವಿಧ ಪ್ರಕರಣಗಳಲ್ಲಿ ನೀಡಿರುವ ಆದೇಶಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 15511-14/2014 ಮತ್ತು 15500/2013 ರಲ್ಲಿನ ಆದೇಶದ ಮೇರೆಗೆ ಒತ್ತುವರಿಯಿಂದ ತೆರವುಗೊಳಿಸುವುದು.

6) ಈ ಮೇಲಿನ ತೀರ್ಮಾನಗಳ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಗಿರುವ ಅರಣ್ಯ ಒತ್ತುವರಿಗಳಲ್ಲಿ ಒತ್ತುವರಿ ಭೂಮಿ ಮತ್ತು ಆತನ ಪಟ್ಟಾ ಭೂಮಿ ಸೇರಿ 3-00 ಎಕರೆಗಿಂತ ಕಡಿಮೆ ಇರುವ ಒತ್ತುವರಿದಾರರನ್ನು ಮುಂದಿನ ಸೂಚನೆಯವರೆಗೆ ಒಕ್ಕಲೆಬ್ಬಿಸಬಾರದು ಎಂಬುದಾಗಿ ಈ ಮೂಲಕ ಸರ್ಕಾರ ತಿಳಿಯಪಡಿಸಿದೆ.

7) ಮೇಲಿನ 6 ನೇ ಪ್ಯಾರಾದಲ್ಲಿನ ಸೂಚನೆಯು ಬಿಎಂಆರ್‌ಡಿ ವ್ಯಾಪ್ತಿಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ಮಹಾನಗರ ಪಾಲಿಕೆ ವ್ಯಾಪ್ತಿಯ, ಅಭಿವೃದ್ಧಿ ಪ್ರಾಧಿಕಾರಿಗಳ ವ್ಯಾಪ್ತಿಯ, ನಗರ ಸಭೆ ಮತ್ತು ಪುರಸಭೆಯ ವ್ಯಾಪ್ತಿಯಲ್ಲಿ ಆಗಿರುವ ಅರಣ್ಯ ಒತ್ತುವರಿದಾರರಿಗೆ ಅನ್ವಯಿಸುವುದಿಲ್ಲ.

ಆದೇಶ ಭಾಗದ ಕ್ರಸಂ. 2, 3 ಮತ್ತು 4 ರಲ್ಲಿನ ಅಂಶಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಕ್ರಮವಹಿಸಲು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಮಾಹಿತಿಯನ್ನು ಕ್ಷೇತ್ರ ಅಧಿಕಾರಿಗಳು ತಯಾರಿಸಿ ದಿನಾಂಕ 31/12/2015 ರೊಳಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಅವರಿಗೆ ಸಲ್ಲಿಸುವುದು. ಕ್ಷೇತ್ರಾಧಿಕಾರಿಗಳಿಂದ ಬಂದಂತಹ ಮಾಹಿತಿಯನ್ನು ಕ್ರೋಢೀಕರಿಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ರವರು ದಿನಾಂಕ 29/02/2016 ರೊಳಗಾಗಿ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಹಿ) 21.9.15
(ಎಲ್. ಶಾಂತ)
ಸರ್ಕಾರದ ಅಧೀನ ಕಾರ್ಯದರ್ಶಿ(ಅರಣ್ಯ-ಸಿ),
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಗೆ,

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
2. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
3. ಎಲ್ಲಾ ಜಿಲ್ಲಾಧಿಕಾರಿದಳು.
4. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
5. ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು.
6. ಎಲ್ಲಾ ವಲಯ ಅರಣ್ಯ ಅಧಿಕಾರಿಗಳು.
7. ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು.
8. ಎಲ್ಲಾ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು.

(2-8:) ಪ್ರ.ಮು.ಅ.ಸಂ. ರವರ ಕಛೇರಿಯ ಮೂಲಕ.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ವಿಧಾನ ಸಭಾ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ/ಸಮಾಜ ಕಲ್ಯಾಣ ಇಲಾಖೆ.
7. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ.

## ಅನುಬಂಧ

ವಿಸ್ತೀರ್ಣ - ಎಕರೆಗಳಲ್ಲಿ

| ಕ್ರಮ ಸಂ. | ವೃತ್ತ | ವಿಭಾಗ | ಒಟ್ಟು ಅರಣ್ಯ ಒತ್ತುವರಿ ಪ್ರಕರಣಗಳು (ಅಫಿಡವಿಟ್ ಪ್ರಕಾರ) | | ಕ್ರಿಯಾ ಯೋಜನೆ (Action plan) ಪ್ರಕಾರ ಒತ್ತುವರಿ ತೆರವುಗೊಳಿಸಲು ನಿಗದಿ ಪಡಿಸಿರುವ ಗುರಿ (3-00 ಎಕರೆ ಮೇಲ್ಪಟ್ಟು) | | ಈವರೆಗೆ ತೆರವು ಗೊಳಿಸಲಾಗಿರುವ ಅರಣ್ಯ ಒತ್ತುವರಿ ಪ್ರಕರಣಗಳು | | ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕುಗಳನ್ನು ಮಾನ್ಯ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿರುವ ಪ್ರಕರಣಗಳು | | ದಿನಾಂಕ 27-4-1978 ರ ಪೂರ್ವದಲ್ಲಿ ಒತ್ತುವರಿ ಆಗಿದ್ದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಬಿಟ್ಟು ಹೋಗಿರುವ ಅರ್ಹ ಪ್ರಕರಣಗಳು | | ದಿನಾಂಕ 1980 ರ ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶಗಳಲ್ಲಿ ಮಾಡಿರುವಂತಹ ಭೂ ಮಂಜೂರಾತಿ ಪ್ರಕರಣಗಳು | | ದಿನಾಂಕ 27-4-1978 ರ ನಂತರದಲ್ಲಿ 3-00 ಎಕರೆವರೆಗಿನ ಒತ್ತುವರಿಗಳು (ಒತ್ತುವರಿಯಾಗಿರುವ ಅರಣ್ಯ ಭೂಮಿ ಮತ್ತು ಆತನಿಗೆ ಸೇರಿದ ಪಟ್ಟಾ ಭೂಮಿ ಸೇರಿ 3-00 ಎಕರೆ) | | ಬಿ.ಬಿ.ಎಂ.ಪಿ., ಬಿ.ಎಂ.ಆರ್.ಡಿ., ಮಹಾನಗರ ಪಾಲಿಕೆ, ಅಭಿವೃದ್ಧಿ ಪ್ರಾಧಿಕಾರ, ನಗರ ಸಭೆ, ಪುರಸಭೆ ವ್ಯಾಪ್ತಿಗಳಲ್ಲಿ ಆಗಿರುವ ಅರಣ್ಯ ಒತ್ತುವರಿಗಳು | | ದಿನಾಂಕ 13-3-2015 ರ ಸರ್ಕಾರದ ಸುತ್ತೋಲೆ ಅನ್ವಯ ಒತ್ತುವರಿ ತೆರವಿಗೆ ಬಾಕಿ ಉಳಿಯುವ ಅರ್ಹ ಪ್ರಕರಣಗಳು | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | | ಪ್ರಕರಣ | ವಿಸ್ತೀರ್ಣ | ಪ್ರಕರಣ | ವಿಸ್ತೀರ್ಣ | ಪ್ರಕರಣ | ವಿಸ್ತೀರ್ಣ | ಪ್ರಕರಣ | ವಿಸ್ತೀರ್ಣ | ಪ್ರಕರಣ | ವಿಸ್ತೀರ್ಣ | ಪ್ರಕರಣ | ವಿಸ್ತೀರ್ಣ | ಪ್ರಕರಣ | ವಿಸ್ತೀರ್ಣ | ಪ್ರಕರಣ | ವಿಸ್ತೀರ್ಣ | ಪ್ರಕರಣ | ವಿಸ್ತೀರ್ಣ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 |
| | | | | | | | | | | | | | | | | | | | | | |
| | | | | | | | | | | | | | | | | | | | | | |
| | | | | | | | | | | | | | | | | | | | | | |

ಅನುಬಂಧ-4

No.8-50/95-FC, dated 15-5-96,
Government of India,
Ministry of Environment & Forests,
CGO Complex, Lodhi Road,
Paryavaran Bhavan, New Delhi-110003.

To

The Secretary (Forests)
Government of Karnataka,
BANGALORE.

Sub:- Diversion of 17,007.23 ha. of forest land for regularisation of encroachments taken place over forest land prior to 27-4-1978 in Karnataka.

---

Sir,

I am directed to refer to your letter No.FEE.5.FGL.90/I, dated 16-7-1995 on the above mentioned subject seeking prior approval of the Central Government in accordance with Section 2 of the Forest (Conservation) Act, 1980 and to say that the proposal has been examined by the Advisory Committee constituted by the Central Government under Section 3 of the aforesaid Act.

2. After careful consideration of the proposal of the State Government and on the basis of the recommendation of the above mentioned Advisory Committee, the Central Government hereby conveys its approval under Section 2 of the Forest (Conservation) Act, 1980 for diversion of 14,848.83 ha. of forest land for regularisation of encroachments taken place over forest land prior to 27-4-1978 in respect of 19,348 cases in Karnataka subject to the following conditions:

(i) Regularisation of encroachments will not be done in favour of encroachers, in the midst of forest area, steep slopes or in the wildlife sanctuaries, national parks, etc., Such encroachers are to be re-located on the fringe of the forest for which excess area available with eligible encroachers may be utilised.

(ii) Regularisation of encroachments in favour of an encroacher will not be done in excess of permissible limit of 3 acres fixed by the State Government or in excess of actual forest area under encroachment, whichever is less.

(iii) Area demarcated on the ground in respect of individual encroachments will be strictly adhered to by the State Government.

(iv) Steps shall be taken by the State Government to evict all unauthorised encroachments taken place over forest land after 27th April 1978.

(v) As agreed to by the State Government, the surplus areas will be taken back from the encroachers and will be demarcated and afforested with suitable species under various schemes undertaken by the Department as a time bound programme, over a period of 5 years. Further, forest areas which will be vacated by evicting unauthorised encroachments will also be afforested by the State Government in time-bound manner.

(vi) Compensatory afforestation shall be carried out
over equivalent non-forest land at the project cost within a
period of 3 years. Non-forest areas identified for compensatory
afforestation will be transferred and mutated in favour of the
State Forest Department and notified as protected/reserve
forests. The entire funds for compensatory afforestation will
be provided by 1997-98 by the State Government as per the
commitment made in the letter No.FEE.5:FCL.90(1) dated 21-3-96
of Principal Secretary (Forests), Karnataka.

(vii) The State Govt. will take steps to denotify the
forest area being permitted for regularisation in the present
case.

(viii) The State Govt. will submit district-wise
monthly reports regarding forest areas surveyed, demarcated and
regularised for encroachments and the extent of compensatory
afforestation raised to the Regional Chief Conservator of
Forests, Bangalore.

(ix) The individual encroachers would not be
entitled for selling of the land, however, the title can
be transferred after the death to legal inheritor.

Yours faithfully,

Sd/-

(R.K.CHAUDHRY)

Asst. Inspector General of Forests.

Copy to: All Heads of the Department.

// COPY //

No. A5.GFL.CR.24/79-80.

Office of the
Principal Chief Conservator of Forests
Bangalore-3, Dated: 23/5/1996.

Copy to all the Deputy Conservators of Forests
(Territorial) and Wildlife, Working Plan for information
and needful action.

Copy to the Conservators of Forests (Territorial)
and Wildlife for information and needful action.

Copy with compliments to the Addl. Principal Chief
Conservator of Forests, Wildlife, Bangalore for information.

Copy with compliments to the Chief Conservators
of Forests, Western Ghats/Working Plan/Development/
Social Forestry/Administration, Bangalore for information.

DESPATCHED

for PRINCIPAL CHIEF CONSERVATOR OF FORESTS.

o/c 23/5 23/5/96